ಕನ್ನಡಪರ ಸಂಘಟನೆಗಳ ಕನ್ನಡ ಭಾಷೆ, ನೆಲ, ಜಲಕ್ಕೆ ಸಂಬಂಧಿಸಿದ ಹೋರಾಟಗಳಿಗೆ ಅವಕಾಶ ನೀಡುವುದಿಲ್ಲ ಎಂದು ಹೇಳುವ ಮೂಲಕ ಗೃಹ ಸಚಿವ ರಾಮಲಿಂಗಾರೆಡ್ಡಿ ಅವರು ಕನ್ನಡಿಗರ ಹೋರಾಟವನ್ನು ಹತ್ತಿಕ್ಕಲು ಯತ್ನಿಸುತ್ತಿದ್ದಾರೆ. ಅನಗತ್ಯ ಪ್ರಕರಣಗಳನ್ನು ದಾಖಲಿಸಿದರೆ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು.

• **ವಾಟಾಳ್ ನಾಗರಾಜ್** ಅಧ್ಯಕ್ಷ, ಕನ್ನಡ ಚಳವಳಿ ವಾಟಾಳ್ ಪಕ್ಷ



### ಪಟಾಕಿಯಿಂದ ಉಸಿರಾಟ ಸಂಬಂಧಿ ಕಾಯಿಲೆಗಳು ಉಲ್ಬಣ | ದೀಪಾವಳಿಯ 3 ದಿನ ಉಸಿರಾಡುವುದು ರೋಗ ತಂದುಕೊಂಡಂತೆ

# ಉಸಿರಾಡಿದರೆ ರೋಗ, ಉಸಿರಾಡದಿದ್ದರೆ ಸಾವು!

• **ರಮೇಶ್ ಬನ್ನಿಕುಪ್ಪೆ** ಬೆಂಗಳೂರು

ದೀಪಗಳ ಹಬ್ಬ ದೀಪಾವಳಿಯಂದು ಪಟಾಕಿಗಳನ್ನು ಸುಡುವುದರಿಂದ ಆರೋಗ್ಯ ಮತ್ತು ಪರಿಸರಕ್ಕೆ ಹಾನಿಕರವಾದ ನೈಟ್ರೇಡ್, ನಿಕ್ಕಲ್, ಟೆರಿಯಂ, ಕ್ರೋಮಿಯಂ, ಪೊಟ್ಯಾಷಿಯಂನಂತಹ ವಿಷಕಾರಿ ರಾಸಾಯನಿಕಗಳು ವಾತಾವರಣದಲ್ಲಿ ಸೇರ್ಪಡೆಗೊಳ್ಳಲಿವೆ. ಹಬ್ಬದ ಅವಧಿಯ ಮೂರು ದಿನಗಳ ಕಾಲ ನಗರದಲ್ಲಿ ಉಸಿರಾಡುವುದು ಅಕ್ಷರಶಃ ರೋಗಗಳನ್ನು ಮೈಮೇಲೆ ಎಳೆದುಕೊಂಡಂತೆ! ಹೌದು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ನೀಡಿರುವ ಅಂಕಿ ಅಂಶ ಗಳನ್ನು ಪರಿಶೀಲಿಸಿದರೆ ಈ ಆಘಾತಕಾರಿ ಅಂಶ ಬೆಳಕಿಗೆ ಬರುತ್ತದೆ. ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕವಾದ ಅಂಶಗಳುಳ್ಳ ರಾಸಾಯನಿಕ ವಸ್ತುಗಳನ್ನು ಪಟಾಕಿ ತಯಾರಿಕೆಗೆ ಬಳಕೆ ಮಾಡಲಾಗುತ್ತಿದೆ. ಇಂತಹ ಅಂಶಗಳುಳ್ಳ ಪಟಾಕಿಗಳನ್ನು ಬೆಂಕಿಯಿಂದ ಸುಟ್ಟಲ್ಲಿ ಗಂಧಕದ ಡೈ ಆಕ್ಸೈಡ್, ಸಾರಜನಕದ ಡೈ ಆಕ್ಸೈಡ್, ಅಮೋನಿಯಾ ಹಾಗೂ ಸೀಸದ ಕಣಗಳು ಗಾಳಿಯಲ್ಲಿ ಸೇರ್ಪಡೆಗೊಂಡು, ಆಮ್ಲಜನಕದ ಪ್ರಮಾಣ ಕಡಿಮೆ ಯಾಗಿ ಮಾನವನಲ್ಲಿ ಉಸಿರಾಟ ಸಂಬಂಧಿ ಕಾಯಿಲೆಗಳು ಉಲ್ಬಣಗೊಳ್ಳುತ್ತವೆ.

ಪಟಾಕಿ ಬ್ಯಾನ್ ಆಗ್ಬೇಕ್

ಪಟಾಕಿ ತಯಾರಿಕೆಗೆ ಬಳಸುವ ಸಲ್ಫರ್ ನೈಟ್ರೇಟ್, ಮೆಗ್ನೀಷಿಯಂ, ನೈಟ್ರೋಜನ್ ಡೈಯಾಕ್ಸೈಡ್ ಗಾಳಿಯಲ್ಲಿ ಸೇರುತ್ತವೆ. ಇದು ಚರ್ಮಕ್ಕೆ ಸಂಬಂಧಿಸಿದ ಕಾಯಿಲೆ ಉಂಟಾಗಲು ಕಾರಣವಾಗಲಿದೆ. ಸಲ್ಫರ್ ಡಯಾಕ್ಸೈಡ್ ಸೇವನೆ ಉಬ್ಬಸ, ಕ್ಯಾಡ್ಮಿಯಂ ಸೇವನೆಯಿಂದಾಗಿ ರಕ್ತಹೀನತೆ ಮತ್ತು ಮೂತ್ರಪಿಂಡಕ್ಕೆ ಸಂಬಂಧಿಸಿದ ಕಾಯಿಲೆಗಳು ಉಂಟಾಗಲಿವೆ. ಅಷ್ಟೇ ಅಲ್ಲ, ಮನುಷ್ಯನ ನರಮಂಡಲಕ್ಕೆ ತೀವ್ರ ತರದ ಪೆಟ್ಟು ಬೀಳಲಿದೆ ಎಂಬ ಆಘಾತಕಾರಿ ಅಂಶಗಳನ್ನು ತಜ್ಞರು ವಿವರಿಸುತ್ತಾರೆ.

**ಪ್ರಾಣಿ, ಪಕ್ಷಿಗೆ ಹಾನಿ:** ಇನ್ನು ಪಟಾಕಿಗಳಿಂದ ನಗರದ ಉದ್ಯಾನಗಳಲ್ಲಿರುವ ಪ್ರಾಣಿ ಮತ್ತು ಪಕ್ಷಿ ಸಂಕುಲಕ್ಕೆ ತೀವ್ರತರಹದ ಹಾನಿಯಾಗಲಿದ್ದು, ಅನೇಕ ಜೀವಸಂಕುಲಗಳು ಸಾವನ್ನಪ್ಪುವ ಅಪಾಯವಿದೆ. ಆದ್ದರಿಂದ ಪಟಾಕಿ ಹೊಡೆಯುವುದನ್ನು ಸಂಪೂರ್ಣವಾಗಿ ನಿಷೇಧಿಸುವ ಮೂಲಕ ಪರಿಸರ ರಕ್ಷಣೆ ಮಾಡಬೇಕು ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ.ಟಿ.ವಿ. ರಾಮಚಂದ್ರ ಅಭಿಪ್ರಾಯಪಡುತ್ತಾರೆ.

ಮಾಲಿನ್ಯಯುಕ್ತ ಗಾಳಿ ಸೇವನೆಯಿಂದ ಮಕ್ಕಳ ಆಯಸ್ಸು 10 ವರ್ಷ ಕಡಿಮೆಯಾಗಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಅಲ್ಲದೆ, ಪಟಾಕಿ ಹೊಗೆಯನ್ನು ಗರ್ಭಿಣಿಯರು ಸೇವಿಸಿದಲ್ಲಿ ಭ್ರೂಣದಲ್ಲಿಯೇ ಮಗು ಅಸ್ತಮಾಕ್ಕೆ ತುತ್ತಾಗುವ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರಗಳು ಪಟಾಕಿ ಮಾರಾಟ ಸಂಪೂರ್ಣವಾಗಿ ನಿಷೇಧಿಸಬೇಕು. ಆ ನಿಟ್ಟಿನಲ್ಲಿ ಕಾನೂನು ಜಾರಿ ಮಾಡಬೇಕು ಎಂದು ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯದ ಸುಸ್ಥಿರ ವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ಪ್ರೊ.ಹರಿಣಿ ನಾಗೇಂದ್ರ ಆತಂಕ ವ್ಯಕ್ತಪಡಿಸುತ್ತಾರೆ.

**ನಿಯಮಗಳ ಉಲ್ಲಂಘಿಸಿ ತಯಾರಿಕೆ:** ಪಟಾಕಿ ತಯಾರಿಕಾ ಕಂಪನಿಗಳು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ನಿಯಂತ್ರಣದಲ್ಲಿವೆ. ಪಟಾಕಿಗೆ ಅಲ್ಯೂಮಿನಿಯಂ, ಸಲ್ಫೇಟ್, ಪೊಟ್ಯಾಷಿಂ ಮತ್ತು ನೈಟ್ರೇಟ್‌ಗಳನ್ನು ಕೇವಲ 5 ಗ್ರಾಂ ನಷ್ಟು ಮಾತ್ರ ಬಳಕೆ ಮಾಡಬೇಕು ಎಂಬ ನಿಯಮ ರೂಪಿಸಲಾಗಿದೆ. ಆದರೆ, ಪಟಾಕಿ ಕಂಪನಿಗಳು ತಮ್ಮ ಮಾರುಕಟ್ಟೆ ವ್ಯಾಪ್ತಿ ವಿಸ್ತರಿಸಿಕೊಳ್ಳುವ ಸಲುವಾಗಿ 10ರಿಂದ 15 ಗ್ರಾಂನಷ್ಟು ರಾಸಾಯನಿಕಗಳನ್ನು ಬಳಕೆ ಮಾಡುತ್ತಿವೆ. ಜತೆಗೆ ಪರಿಸರಕ್ಕೆ ಹಾನಿಯಾಗುವ ನಿಕ್ಕಲ್, ಟೆರಿಯಂ, ಕ್ರೋಮಿಯಂ ಸೇರಿದಂತೆ ವಿವಿಧ ರಾಸಾಯನಿಕಗಳನ್ನು ಬಳಕೆ ಮಾಡುತ್ತಿವೆ. ಇದನ್ನು ನಿಯಂತ್ರಿಸಲು ಒಂದೆಡೆ ಕೇಂದ್ರ ಸರ್ಕಾರ ಮುಂದಾಗುತ್ತಿಲ್ಲ, ಮತ್ತೊಂದೆಡೆ ರಾಜ್ಯ ಸರ್ಕಾರಕ್ಕೆ ನಿಯಂತ್ರಿಸುವ ಅಧಿಕಾರವಿಲ್ಲ ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ತಮ್ಮ ಅಸಹಾಯಕತೆ ಪ್ರದರ್ಶಿಸುತ್ತಾರೆ.

## ವಾಯುಮಾಲಿನ್ಯದ ಅಂಕಿ-ಅಂಶ

ಕಳೆದ ಮೂರು ವರ್ಷದಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕೆಎಸ್‌ಪಿಸಿಬಿ ನಡೆಸಿದ ವಾಯು ಮಾಲಿನ್ಯ ಪ್ರಮಾಣದ ತಪಾಸಣೆಯ ಅಂಕಿ- ಅಂಶ ಇಂತಿದೆ. (ವೈಜ್ಞಾನಿಕ ಆಧಾರದಲ್ಲಿ 100ಕ್ಕಿಂತ ಕಡಿಮೆ ಪ್ರಮಾಣದ ಮಾಲಿನ್ಯ ದಾಖಲಾಗಬೇಕು)

| ವರ್ಷ | 2014 | 2015 | 2016 |
|---|---|---|---|
| ಐಟಿಪಿಎಲ್ | 234 | 107 | 172 |
| ಪೀಣ್ಯ ಕೈಗಾರಿಕೆ | 112 | 80 | 105 |
| ರೈಲ್ವೆ ನಿಲ್ದಾಣ | 207 | 117 | 96 |
| ಮೈಸೂರು ರಸ್ತೆ | 245 | 79 | 155 |
| ಸಿಲ್ಕ್ ಬೋರ್ಡ್ | 124 | 112 | 144 |
| ಯಶವಂತಪುರ | 128 | 90 | 99 |
| ವಿಕ್ಟೋರಿಯಾ ಆಸ್ಪತ್ರೆ | 548 | 96 | 81 |
| ನಿಮ್ಹಾನ್ಸ್ | 216 | 76 | 78 |

## ಸುಪ್ರೀಂ ಆದೇಶ ಅನುಷ್ಠಾನ ಅಸಾಧ್ಯ

ದೆಹಲಿಯಲ್ಲಿ ಪಟಾಕಿ ನಿಷೇಧ ಮಾಡಿರುವ ಸುಪ್ರೀಂಕೋರ್ಟ್ ಆದೇಶವನ್ನು ಬೆಂಗಳೂರಿನಲ್ಲಿಯೂ ಅನುಷ್ಠಾನ ಮಾಡಬೇಕು ಎಂಬುದು ಪರಿಸರ ಮತ್ತು ಕಾನೂನು ತಜ್ಞರು ಆಗ್ರಹವಾಗಿದ್ದರೆ, ಈ ಆದೇಶವನ್ನು ಜಾರಿ ಮಾಡಲು ಸಾಧ್ಯವಿಲ್ಲ ಎಂದು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಲಕ್ಷ್ಮಣ್ ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತು 'ಕನ್ನಡಪ್ರಭ'ದೊಂದಿಗೆ ಮಾತನಾಡಿದ ಅವರು, ದೆಹಲಿಯ ಪರಿಸರ ಮಾಲಿನ್ಯ ಪ್ರಮಾಣವನ್ನು ಆಧರಿಸಿ ಪಟಾಕಿ ನಿಷೇಧ ಮಾಡಲಾಗಿದೆ. ಅಲ್ಲಿನ ಪರಿಸರಕ್ಕೂ ಬೆಂಗಳೂರಿನ ಪರಿಸರಕ್ಕೂ ಸಾಕಷ್ಟು ವ್ಯತ್ಯಾಸವಿದ್ದು, ಸುಪ್ರೀಂಕೋರ್ಟ್ ಆದೇಶದಂತೆ ಪಟಾಕಿ ಮಾರಾಟ ನಿಷೇಧ ಸಾಧ್ಯವಿಲ್ಲ. ಆದರೂ ಈ ಕುರಿತು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿದ್ದಾರೆ.

## ಪಟಾಕಿಯಿಂದ ಏನೇನು ಆರೋಗ್ಯ ಸಮಸ್ಯೆ?

ಪಟಾಕಿಯಿಂದ ಹೊರ ಬರುವ ಮದ್ದು ವಾಸನೆಯುಕ್ತ ಹೊಗೆ ಸೇವನೆಯಿಂದ ಅಸ್ತಮಾ, ಶ್ವಾಸಕೋಶ ಮತ್ತು ಉಸಿರಾಟದ ತೊಂದರೆಗಳು ಕಾಣಿಸಿಕೊಳ್ಳಲಿವೆ. ಅಲ್ಲದೆ, ಮಧುಮೇಹ, ರಕ್ತದೊತ್ತಡದಿಂದ ಬಳಲುತ್ತಿರುವವರು ಹೃದಯಕ್ಕೆ ಸಂಬಂಧಿ ಕಾಯಿಲೆಗೆ ತುತ್ತಾಗುವ ಸಾಧ್ಯತೆಗಳಿವೆ. ಮಾತ್ರವಲ್ಲದೇ ಚಿಕ್ಕಮಕ್ಕಳು ಅಸ್ವಸ್ಥಗೊಳ್ಳುವ ಸಾಧ್ಯತೆಗಳಿವೆ. ಪಟಾಕಿಯಿಂದ ಹೊರ ಬರುವ ಸೀಸದ ಪ್ರಮಾಣ ಮಣ್ಣು ಮತ್ತು ನೀರಿನ ಮುಖಾಂತರ ಮನುಷ್ಯನ ದೇಹಕ್ಕೆ ಸೇರುವುದರಿಂದ ಅಜೀರ್ಣ ಮತ್ತು ಕ್ಯಾನ್ಸರ್‌ನಂತಹ ರೋಗಗಳು ಕಾಣಿಸಿಕೊಳ್ಳುವ ಸಾಧ್ಯತೆಗಳಿವೆ.